ಅವನೇ ಹೋಗಿಬಂದರೂ ಫಲ ಸಿಕ್ಕಿರಲಿಲ್ಲ. ಮಗುವಿಗೆ ಒಂಬತ್ತು ತಿಂಗಳು ತುಂಬುತ್ತಿದ್ದಂತೆ ಗಂಡ ಹೆಂಡತಿ ಇಬ್ಬರೂ ಮಗಳನ್ನು ಕರೆದುಕೊಂಡು ತಿಮ್ಮರಾಯನ ಮನೆಗೆ ನಡೆದರು. ಅಲ್ಲಿ ರಂಗಜ್ಜಿ ಮತ್ತು ಮಗುವನ್ನು ಆಚೆಯೇ ನಿಲ್ಲಿಸಿ ಒಳಗೆ ಬರದಂತೆ ಲಕ್ಷ್ಮಣರೇಖೆ ಎಳೆಯಲಾಯಿತು. ರಂಗಜ್ಜಿಯ ತಂದೆ ಮತ್ತು ತಾಯಿಯ ಗೋಳಾಟ ಊರಿನ ಪ್ರತಿ ಮನೆಯ ಒಲೆಯ ತನಕ ನುಗ್ಗಿತ್ತು. ರಂಗಜ್ಜಿಗೆ ಯಾಕೋ ಇದು ವಿಪರೀತಕ್ಕೆ ಹೋಗುತ್ತಿದೆ ಎಂದನಿಸಿತು. ಕಡೆಯ ಬಾರಿಗೆ ಎಂಬಂತೆ ತಿಮ್ಮರಾಯನ ಕಡೆಗೆ ನೋಡಿದಳು. ಅವನು 'ಯಾರ್‍ಯಾರ್‍ದೋ ವುಟ್ಟ ಮಗೂನ ನಮ್ಮ ಮನಿಯೊಳುಕೆ ಬಿಟ್ಟುಕೊಳ್ಳೊ ಕರ್ಮ ನಮಗ್ಯಾಕೆ. ನಮ್ಮದೇನು ಆದರಕ್ಕುಟ್ಟಿದ ಮನ್ತನ ಅಲ್ಲ' ಎಂದು ಗುಡುಗಿದ. ಅವಳಿಗೆ ರೋಸಿಹೋಗಿತ್ತು. ಅಳುತ್ತಿರುವ ಮಗುವನ್ನು ಎದಗಪ್ಪಿಕೊಂಡು ಕುಸಿದು ಕುಳಿತಿರುವ ತಂದೆ ತಾಯಿಯನ್ನು ಎಬ್ಬಿಸಿ ಕಲ್ಲೂರಿನ ದಾರಿ ಹಿಡಿದುಬಿಟ್ಟಳು. ಅದೇ ಕೊನೆ, ಅವಳು ಮತ್ತೆಂದೂ ಗಂಡನ ಮನೆಗೆ ಹೋಗುವ ವಿಷಯವನ್ನು ಮರೆತುಬಿಟ್ಟಳು. ಮತ್ತು ಅಪ್ಪಿತಪ್ಪಿಯೂ ಮಾತಿನ ಓಘದಲ್ಲಿ ಗಂಡ ಮತ್ತು ಅವನ ಮನೆಯವರ ಪ್ರಸ್ತಾಪ ಬರದ ಹಾಗೆ ಎಚ್ಚರ ವಹಿಸಿದಳು.

ರಂಗಜ್ಜಿಗೆ ಮತ್ತೊಮ್ಮೆ ಎಲ್ಲವೂ ನೆನಪಿಗೆ ಬರತೊಡಗಿದವು. ಕಣ್ಣಂಚಿಗೆ ನೀರು ಜಿನುಗಲು ಪ್ರಯತ್ನಿಸಿತು. ಅದಕ್ಕೂ ತ್ರಾಣವಿಲ್ಲದಂತೆ ಅಂಚಿನಲ್ಲೆ ನಿಂತುಕೊಂಡು ಘನಗೊಳ್ಳಲು ಯತ್ನಿಸತೊಡಗಿತು. ಒಂದೆರಡು ನೊಣಗಳು ಏನೋ ವಿಶೇಷವಾದ ಕಸುವು ಸಿಕ್ಕಿತು ಎಂಬಂತೆ ಹಾರಿ ಅವಳ ಕಣ್ಣಂಚಿಗೆ ಮೆತ್ತಿಕೊಂಡವು. ಅವಳು ರೆಪ್ಪೆಯನ್ನು ಬಡಿದು ಓಡಿಸಲು ಪ್ರಯತ್ನಿಸಿದಳು. ಅವು ತುಸು ಪಕ್ಕಕ್ಕೆ ಜರುಗಿ ಮತ್ತೆ ಕಣ್ಣಂಚಿಗೆ ಜರುಗಿದವು. ರಂಗಜ್ಜಿ ಅವಾದರೂ ಸಂಭ್ರಮಿಸಲಿ ಎನ್ನುವಂತೆ ಸುಮ್ಮನಾದಳು. ಯಾಕೋ ಅವಳಿಗೆ ತಂದೆಯ ನೆನಪು ಗುದ್ದಿಕೊಂಡು ಬರತೊಡಗಿತು. ಗಂಟಲು ಉಬ್ಬಿದ ಹಾಗಾಯಿತು. ತಂದೆ ಚಿಕ್ಕಪ್ಪನನ್ನು ಮನೆಯ ಮುಂದೆ ಕೆಡವಿಕೊಂಡು ಬಡಿದದ್ದು; ಮತ್ತೆ ಅದೇ ತಿಂಗಳಲ್ಲೆ ತರಾತುರಿಯಲ್ಲಿ ತನ್ನ ಮದುವೆ ಮಾಡಿ ಮುಗಿಸಿದ್ದು... ಎಲ್ಲವನ್ನೂ ಗಮನಿಸಿದರೆ ತನ್ನ ಹಾಗೂ ಚಿಕ್ಕಪ್ಪನ ವಿಷಯ ಅವನಿಗೆ ಗೊತ್ತಿರಬಹುದು ಎಂದು ಅನೇಕ ಬಾರಿ ಅವಳು ಅಂದುಕೊಂಡದ್ದುಂಟು. ಹಾಗೆಯೇ ಗಂಡ ತಿಮ್ಮರಾಯಿಗೂ ತನ್ನ ಹಾಗೂ ಚಿಕ್ಕಪ್ಪನ ವಿಷಯ ತಿಳಿದೇ ಅವನ ನಡವಳಿಕೆಯಲ್ಲಿ ಆ ಪಾಟಿ ಬದಲಾವಣೆ ಕಂಡುಬಂದದ್ದು ಎಂಬ ಅನುಮಾನ ಈಗಲೂ ಅವಳಲ್ಲಿ ಹೊಗೆಯಾಡುವುದುಂಟು. ಏನೇ ಆದರೂ ಅವನು ತನಗೊಂದು ಅವಕಾಶ ಕೊಡಬಹುದಿತ್ತು. ತನಗಾದ ಗಾಯದ ಮರ್ಮದ ಜಾಡು ಹಿಡಿಯಲು ಪ್ರಯತ್ನಿಸಬಹುದಿತ್ತು. ತನ್ನ ಗಂಡಸುತನವನ್ನು ಬದಿಗೊತ್ತಿ ಹೆಣ್ಣಾಗಿ ಪಕ್ಕದಲ್ಲಿ ಕೂತು ಆಲಿಸಿಕೊಳ್ಳಬಹುದಿತ್ತು ಎಂದು ಎಷ್ಟು ಬಾರಿ ಅಂದುಕೊಂಡಿರುವಳೋ. ಹಾಗೆ ಪ್ರತಿಸಾರಿ ಅಂದುಕೊಂಡಾಗಲೂ ಅವಳ ಗಂಟಲು ಬಿಗಿಗೊಳ್ಳುತ್ತಲಿತ್ತು. ಕಣ್ಣಾಲಿಗಳು ದಿಕ್ಕೆಟ್ಟಂತೆ ಚಲಿಸುತ್ತಲಿದ್ದವು. ಅದು ಅವಳ ಪ್ರತಿ ದಿನದ ಬದುಕಾಗಿತ್ತು.

ಮತ್ತೆ ಅವಳ ಗಂಟಲು ಬಿಗಿಗೊಳ್ಳತೊಡಗಿತು. ತಲೆ ಸಿಡಿಯುವಂತೆ ನೋಯುತ್ತಲಿತ್ತು. ಇತ್ತೀಚೆಗೆ ಈ ತಲೆನೋವು ನಿದ್ದೆಯನ್ನೂ ಮಾಡದ ರೀತಿಯಲ್ಲಿ ಕಾಡುತ್ತಿದೆಯಲ್ಲ ಎಂದುಕೊಂಡು ತಲೆಯನ್ನು ಪಕ್ಕಕ್ಕೆ ಹೊರಳಿಸಿ ಪಡಸಾಲೆಯ ನೆಲದ ಮೇಲೆ ದೃಷ್ಟಿಯನ್ನು ಹಾಯಿಸಿದಳು. ಆಗಲೆ ಕುಸುಮ ಹಾಕಿ ಹೋಗಿದ್ದ ಮದ್ದಿನ ದೆಸೆಯಿಂದ ಸಾಕಷ್ಟು ನೊಣಗಳು ಚೆದುರಿಕೊಂಡು ಸತ್ತು ಬಿದ್ದಿದ್ದವು. ಇನ್ನೂ ಕೆಲವು ಅಂಗಾತ ಬಿದ್ದು ತುಸುವೆ ಮಿಸುಕಾಡುತ್ತಲಿದ್ದವು. ಬಹಳ ಹೊತ್ತು ಅವುಗಳ ಕಡೆಗೇ ನೋಡುತ್ತಲಿದ್ದ ಅವಳು ನಂತರ 'ಲೇ ಕುಸ್ಮ, ಮದ್ದಿಗೆ ನೊಣಗ್ಳು ಸತ್ತು ಬಿದ್ದವೆ. ಗುಡ್ಸಿ ತಿಪ್ಪೇಗಾಕಾಕಿಲ್ವೆ' ಎಂದು ಕೂಗಿದಳು. ಸ್ವಲ್ಪ ಸಮಯಕ್ಕೆ ಪೊರಕೆ ಮತ್ತು ಮೊರವನ್ನು ಹಿಡಿದುಕೊಂಡು ಬಂದ ಕುಸುಮ ಸತ್ತು ಬಿದ್ದಿದ್ದ ಮತ್ತು ಸಾಯುತ್ತಲಿದ್ದ ನೊಣಗಳನ್ನು ಗುಡಿಸಿ ಮೊರದೊಳಗೆ ತಳ್ಳಿಕೊಂಡು ತಿಪ್ಪೆಯ ಕಡೆಗೆ ನಡೆದಳು. ಅವಳ ಕಡೆಗೇ ನೋಡುತ್ತಲಿದ್ದ ರಂಗಜ್ಜಿಗೆ ತನ್ನ ಮಗಳ ನೆನಪು ನವಿರಾಗಿ ಕಾಡತೊಡಗಿತು.

ಗಂಡನ ಮನೆಯವರು ಅವಳನ್ನು ತೊರೆದ ಮೇಲೆ ಅಕ್ಕರೆ ಮತ್ತು ಕಾಳಜಿಯಿಂದಲೆ ಮಗಳನ್ನು ಬೆಳೆಸಿದ್ದಳು. ಅವಳಿಗೆ ನಾಲ್ಕು ವರ್ಷ ತುಂಬುವಷ್ಟರಲ್ಲಿ ರಂಗಜ್ಜಿಯ